**ದಿನಾಂಕ 19.07.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಜಿ.ಟಿ. ವಕೀಲರಿಂದ**

ನಾನು ಶಿಕ್ಷಕನಾಗಿ ಕರ್ತವ್ಯ ಮಾಡುತ್ತಿದ್ದೇನೆ. ನನ್ನ ತಂದೆಯ ಹೆಸರು ದೇವಪ್ಪ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿಯ ಹೆಸರು ಕೆಂಪಮ್ಮ, 2 ನೇ ಹೆಂಡತಿಯ ಹೆಸರು ಶಿವಮ್ಮ. ಮೊದಲನೆ ಹೆಂಡತಿಗೆ ಒಬ್ಬರು ಮಗಳು ತಾಯಮ್ಮ ಇದ್ದಾರೆ. 2 ನೇ ಹೆಂಡತಿಗೆ ಒಟ್ಟು 4 ಜನ ಮಕ್ಕಳು ಇದ್ದಾರೆ 3 ಜನ ಗಂಡು ಮಕ್ಕಳು ಒಬ್ಬರು ಹೆಣ್ಣು ಮಗಳು. ಅವರ ಹೆಸರು ಶಾಂತಪ್ಪ, ಚನ್ನಬಸಪ್ಪ, ಚಂದ್ರಪ್ಪ ಮತ್ತು ಸುಂದರಮ್ಮ. 2 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು. ಅವರ ಮೊದಲನೆಯ ಹೆಂಡತಿಯ ಹೆಸರು ಮಣಿ, 2 ನೇ ಹೆಂಡತಿಯ ಹೆಸರು ಲತಾಮಣಿ. 2 ನೇ ಪ್ರತಿವಾದಿಯ ಮೊದಲನೆ ಹೆಂಡತಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಅನೀತಾ ಮತ್ತು ಕಲಾವತಿ. 2 ನೇ ಪ್ರತಿವಾದಿಯ 2 ನೇ ಹೆಂಡತಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಮಂಜುಳಾ ಮತ್ತು ಪುಟ್ಟಮಣಿ. 3 ನೇ ಪ್ರತಿವಾದಿಗೆ ಮದುವೆ ಆಗಿಲ್ಲ. 3 ನೇ ಪ್ರತಿವಾದಿಯ ಯೋಗಕ್ಷೇಮವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ. 5 ನೇ ಪ್ರತಿವಾದಿಗೆ ಮದುವೆಯಾಗಿ ಸುಮಾರು 25 ವರ್ಷ ಆಗಿದೆ. 5 ನೇ ಪ್ರತಿವಾದಿ ಮದುವೆಯಾದಾಗ ನನಗೆ ಸುಮಾರು 20 ವರ್ಷ ಆಗಿತ್ತು. 5 ನೇ ಪ್ರತಿವಾದಿ ಮದುವೆಯಾದ ಸಂದರ್ಭದಲ್ಲಿ ಕುಟುಂಬದ ವ್ಯವಹಾರವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. 5 ನೇ ಪ್ರತಿವಾದಿಯ ಮದುವೆಯನ್ನು ಒಟ್ಟು ಕುಟುಂಬದ ವ್ಯವಹಾರದಲ್ಲಿ ಮಾಡಿದ್ದೇವೆ. 5 ನೇ ಪ್ರತಿವಾದಿಯ ಮದುವೆಯನ್ನು 2 ನೇ ಪ್ರತಿವಾದಿ ಒಬ್ಬರೇ ಮಾಡಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಗಳನ್ನು 1985 ರಲ್ಲಿ ಭಾಗ ಮಾಡಿಕೊಂಡಿದ್ದೇವೆ. ಸಂಬಂಧಪಟ್ಟ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದೇವಪ್ಪನವರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳು ಇಲ್ಲಿಯವರೆಗೂ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ವಿಭಾಗ ಆಗದೇ ಇದ್ದರೂ ವಾದಿಗಳ ಹಕ್ಕನ್ನು ಚ್ಯುತಿ ಮಾಡಲು ವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ನಾವು ವಿಭಾಗ ಮಾಡಿಕೊಂಡಾಗ ಸರ್ವೆ ನಂಬರ್ 39/1 ರಲ್ಲಿ 28 ಗುಂಟೆ ಭಾಗ ಕೊಟ್ಟಿದ್ದೇವೆ. 3 ನೇ ಪ್ರತಿವಾದಿಗೆ ಆಸ್ತಿಯನ್ನು ಕೊಡದೇ ಮೋಸ ಮಾಡಿದ್ದೇವೆ

ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಆಸ್ತಿ ಕೊಟ್ಟಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಶ್ರೀ ಕೆ.ಜೆ.ಟಿ. ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ನೀಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.